Over 20 Years of Celebrating the Arts

India Foundation for the Arts

I F A

ಕಲಿ-ಕಲಿಸು
AN ARTS EDUCATION TEACHER INITIATIVE
KALI-KALISU

ಕರ್ನಾಟಕದ ಸರ್ಕಾರಿ ಶಾಲೆಗಳ ಕಲಾ ಶಿಕ್ಷಣ ಯೋಜನೆಯಲ್ಲಿ

# ಆಸಕ್ತಿಯುಳ್ಳ ಕಲಾವಿದರಿಂದ ಪ್ರಸ್ತಾವನೆಗಳನ್ನು ಆಹ್ವಾನಿಸಿದೆ

## ಪ್ರಸ್ತಾವನೆಗಳನ್ನು ಸಲ್ಲಿಸಲು ಕಡೆಯ ದಿನಾಂಕ ೧೧. ೦೮ ೨೦೧೭

ಇಂಡಿಯಾ ಫೌಂಡೇಶನ್ ಫಾರ್ ದಿ ಆರ್ಟ್ಸ್ ( ಐಯ್. ಎಫ್. ಎ ) ಕರ್ನಾಟಕದ ಸರ್ಕಾರಿ ಶಾಲೆಗಳಲ್ಲಿ ಕಲಾತ್ಮಕ ಯೋಜನೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಕಲಾವಿದರುಗಳಿಂದ ಪ್ರಸ್ತಾವನೆಗಳನ್ನು ಕೋರುತ್ತಿದೆ. ಈ ಕಾರ್ಯಕ್ರಮವು ಸಂಸ್ಥೆಯ 'ಕಲಿ ಕಲಿಸು ' ಚಟುವಟಿಕೆಯ ಒಂದು ಭಾಗವಾಗಿ ಈ ಕೆಳಗಿನ ಧ್ಯೇಯೋದ್ದೇಶಗಳನ್ನು ಹೊಂದಿದೆ.

- ಕಲಾತ್ಮಕ ಹಸ್ತಕ್ಷೇಪದ ಮೂಲಕ ಪಠ್ಯಕ್ರಮ ಮತ್ತು ತರಗತಿಯ ಬೋಧನೆಯನ್ನು ಪುಷ್ಟೀಕರಿಸುವುದು.
- ಕಲಾವಿದರು, ಶಿಕ್ಷಕರು ಮತ್ತು ಹಾಗು ಶಾಲೆಯ ಸಮುದಾಯವು ಜೊತೆಯಾಗಿ ಕಾರ್ಯವಹಿಸುವುದನ್ನು ಪ್ರೋತ್ಸಾಹಿಸುವುದು.
- ಯೋಜನಾ ಅವಧಿಯ ನಂತರವೂ ಯೋಜನಾ ಕಾರ್ಯಕ್ರಮವು ಮುಂದುವರೆಯುವ ರೀತಿಯಲ್ಲಿ ಸದೃಢವಾದ ಬುನಾದಿಯನ್ನು ಹಾಕಿರಬೇಕು.

### ಪ್ರಸ್ತಾಪನೆಯನ್ನು ಯಾರು ಸಲ್ಲಿಸಬಹುದು?

- ಕಲಾ ಶಿಕ್ಷಣದಲ್ಲಿ ಪೂರ್ವಾನುಭವ ಇರುವ/ಇಲ್ಲದ ಕಲಾವಿದರು ಅಥವಾ ಕಲಾಶಿಕ್ಷಣದಲ್ಲಿ ಸೂಕ್ತವಾದ ತರಬೇತಿ ಪಡೆದವರು ಪ್ರಸ್ತಾಪನೆಯನ್ನು ಸಲ್ಲಿಸಬಹುದು. ಆದಾಗ್ಯೂ, ಪೂರ್ವಾನುಭವ ಇಲ್ಲದಿರುವ ಕಲಾವಿದರು ಕನಿಷ್ಠ ಮಕ್ಕಳೊಂದಿಗೆ ಕಲಾ ಯೋಜನೆಯನ್ನು ನಿರ್ವಹಿಸಿದ ಅನುಭವವನ್ನು ಹೊಂದಿರಬೇಕು.
- ಸ್ಥಳೀಯ ಭಾಷೆಯನ್ನು ಬಲ್ಲವರಾಗಿರಬೇಕು.
- ಭಾರತೀಯ ಪ್ರಜೆಗಳಾಗಿರಬೇಕು ಅಥವಾ ಕನಿಷ್ಠ ಕಳೆದ ಐದು ವರ್ಷಗಳಿಂದ ಭಾರತದಲ್ಲಿ ನೆಲೆಗೊಂಡಿರುವವರಾಗಿರಬೇಕು

### ಪ್ರಸ್ತಾಪನೆಯ ಪ್ರಕ್ರಿಯೆಗಳು

- ನಿಮ್ಮ ಯೋಜನೆಯ ಉದ್ದೇಶಗಳನ್ನು ನಮ್ಮೊಂದಿಗೆ ಹಂಚಿಕೊಳ್ಳುವುದನ್ನು ಪ್ರೋತ್ಸಾಹಿಸುತ್ತೇವೆ. ಆನಂತರ ಕರಡು ಪ್ರಸ್ತಾಪನೆಯನ್ನು **ಜುಲೈ ೧೦. ೨೦೧೭ರ ಒಳಗೆ ಸಲ್ಲಿಸಬೇಕು**
- ಅಂತಿಮ ಯೋಜನೆಯ ಪ್ರತಿಯು **ಆಗಸ್ಟ್ ೧೧, ೨೦೧೭** ರ ಒಳಗೆ ಈ ಕೆಳಗಿನ ದಾಖಲೆಗಳೊಂದಿಗೆ ತಲುಪಬೇಕು.

  - ✓ ಯೋಜನೆಯ ಉದ್ದೇಶಗಳು
  - ✓ ಆಯ್ಕೆಮಾಡಿಕೊಂಡ ಸರ್ಕಾರೀ ಶಾಲೆಯ ಸಂಪೂರ್ಣ ವಿವರ
  - ✓ ಕಾರ್ಯ ವಿಧಾನಗಳ ವಿವರ
  - ✓ ಯೋಜನೆಯಿಂದ ಬರಬಹುದಾದ ಅಪೇಕ್ಷಿತ ಫಲಿತಾಂಶಗಳು

✓ ಆಯ್ಕೆ ಮಾಡಿದ ಶಾಲೆಯ ಮುಖ್ಯೋಪಾಧ್ಯಾಯರ ಒಪ್ಪಿಗೆ ಪತ್ರ

✓ ಖರ್ಚ್ - ವೆಚ್ಚಗಳ ವಿವರ

- ಅನುದಾನವನ್ನು ಸೆಪ್ಟೆಂಬರ್ ೨೮, ೨೦೧೭ ತಾರೀಖಿನೊಳಗೆ ಪ್ರಕಟಿಸಲಾಗುವುದು.

**ಪ್ರಸ್ತಾಪನೆಯ ಭಾಷೆ:**

ಪ್ರಸ್ತಾಪನೆಗಳನ್ನು ಕನ್ನಡ, ಹಿಂದಿ, ಉರ್ದು, ತೆಲುಗು, ಮರಾಠಿ ಮತ್ತು ಇಂಗ್ಲೀಷ್ ಭಾಷೆಗಳಲ್ಲಿ ನೀಡಬಹುದು.

**ಯೋಜನೆಯ ಅವಧಿ:**

ಕನಿಷ್ಠ 6 ತಿಂಗಳಿನಿಂದ ಗರಿಷ್ಠ 18 ತಿಂಗಳವರೆಗೆ

**ಅನುದಾನದ ಮೊತ್ತ:**

ಗರಿಷ್ಠ ರೂ. ೧,೫೦,೦೦೦/-

**ಗಮನಿಸಬೇಕಾದ ಅಂಶಗಳು:**

- ಅನುದಾನವು ಯೋಜನೆಗೆ ಸಂಬಂಧಿಸಿದ ಅಭ್ಯರ್ಥಿಯ ಗೌರವಧನ (ಮಾಸಿಕ ರೂ೧೨,೦೦೦/ ಕ್ಕೆಮೀರದಂತೆ), ಹೆಚ್ಚುವರಿ ಸಂಪನ್ಮೂಲ ವ್ಯಕ್ತಿಯ ಗೌರವಧನ(ಅಗತ್ಯವಿದ್ದರೆ) ಪ್ರಯಾಣದರ, ಡಾಕ್ಯುಮೆಂಟೇಶನ್, ಕಾರ್ಯಾಗಾರ ಹಾಗು ಅದಕ್ಕೆಅಗತ್ಯವಿರುವ ವಸ್ತುಗಳಿಗೆ ಮಾತ್ರ ಖರ್ಚನ್ನು ಒಳಗೊಂಡಿರುತ್ತದೆ. ಅಂದರೆ. ಲೆಕ್ಕ ಪರಿಶೀಲಕರಿಗಾಗಿ ನಿಗಧಿ ಪಡಿಸಿರುವ ರೂ.೩೦೦೦/-ನ್ನು ಯೋಜನೆಯ ಖರ್ಚು ವೆಚ್ಚಗಳಲ್ಲಿ ಸೂಚಿಸಿರಬೇಕು.
- ನಿಗದಿ ಪಡಿಸಿದ ದಿನಾಂಕದಂದು ಐ.ಎಫ್.ಎ ಕಚೇರಿಗೆ ಖುದ್ದಾಗಿ ಬಂದು ನಿಮ್ಮ ಯೋಜನೆಯನ್ನು ಚರ್ಚಿಸಿ, ಪ್ರಸ್ತುತಪಡಿಸಬೇಕು.

ನಿಮ್ಮ ಅನುಮಾನಗಳಿಗೆ /ಪ್ರಶ್ನೆಗಳಿಗೆ/ ಅಗತ್ಯ ಮಾಹಿತಿಗಾಗಿ ಈಕೆಳಗಿನ ಇಮೇಲ್ ವಿಳಾಸಕ್ಕೆ ಬರೆಯಿರಿ ಅಥವಾ ಪತ್ರ ಮುಖೇನ ಕೆಳಕಂಡ ವಿಳಾಸಕ್ಕೆ ಬರೆಯಿರಿ.

ಕೃಷ್ಣಮೂರ್ತಿ. ಟಿ.ಎನ್
ಕಾರ್ಯಕ್ರಮ ನಿರ್ವಾಹಕ ಕಲಾ ಶಿಕ್ಷಣ
ಇಂಡಿಯಾ ಫೌಂಡೇಶನ್ ಫಾರ್ ದಿ ಆರ್ಟ್ಸ್
ಅಪೂರ್ವ ನೆಲಮಹಡಿ, ಸಂಖ್ಯೆ ೨೫೯, ೪ನೇ ಅಡ್ಡ ರಸ್ತೆ, ರಾಜ ಮಹಲ್ ವಿಲಾಸ್, ಎರಡನೇ ಹಂತ, ಬೆಂಗಳೂರು ೫೬೦೦೯೪
ದೂರವಾಣಿ : ೦೮೦ ೨೩೪೧ ೪೬೮೧ / ೮೨

ನಿಮ್ಮ ಪ್ರಸ್ತಾವನೆಗಳನ್ನು ಹಾಗು ಸಂದೇಹಗಳನ್ನು krishna@indiaifa.org ಗೆ ಕಳುಹಿಸಿಕೊಡಲು ಕೋರಲಾಗಿದೆ

The Arts Education Programme for the year 2016-17 is supported by Citi India.

For more information on Kali-Kalisu follow this link:

http://www.indiaifa.org/programmes/arts-education.html